ದಿಃ 18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರವಾಗಿ ಶ್ರೀ ವಿ.ಎಸ್.ಝುಡ್. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಗೆ ಸಂಬಂದಪಟ್ಟಂತೆ ಶಪಥಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದ ಅಂಶಗಳು ಸತ್ಯವಾಗಿರುತ್ತದೆ, ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನನ್ನ ರೆಪರೆನ್ಸ ಅರ್ಜಿಯನ್ನು ನ್ಯಾಯಾಲಯದ ಮುಂದೆ ಎದುರುದಾರರು ಕಳುಹಿಸಿಕೊಟ್ಟಿದ್ದು ಅದನ್ನು ನಿಪಿ-1 ಎಂದು, ನನ್ನ ಆಸ್ತಿಗೆ ಸಂಬಂಧಿಸಿದಂತೆ ಸಿಟಿ ಸರ್ವೆ ದೃಢಿಕೃತ ದಾಖಲೆಯನ್ನು ಸಲ್ಲಿಸಿದ್ದು ಅದನ್ನು ನಿಪಿ-2 ಎಂದು, ಆ ಸಮಯದಲ್ಲಿ ಮಾರಾಟವಾದ ಆಸ್ತಿಗಳ ಖರೀದಿ ಪತ್ರದ ದೃಢಿಕೃತ ನಕಲುಗಳನ್ನು ಹಾಜರಿಸಿದ್ದು ಅವುಗಳನ್ನು ದಿಃ 08.01.2013 ರ ಖರೀದಿ ಪತ್ರದ ದೃಢಿಕೃತ ನಕಲನ್ನು ಈಗಾಗಲೇ ಇನ್ನೊಂದು ಪ್ರಕರಣದಲ್ಲಿ ಸಲ್ಲಿಸಿ ದೃಢಿಕೃತ ನಕಲನ್ನು ಸಲ್ಲಿಸುತ್ತಿದ್ದೇನೆ ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ಆ ಕುರಿತು ದಿನಾಂಕಃ 30.11.2013 ಹಾಗೂ 28.02.2015 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಬಂದಿರುವುದನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ಎಲ್.ಎ.ಸಿ 1930/2014 ರ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆದ ಐತೀರ್ಪು ದೃಢಿಕೃತ ನಕಲು ಹಾಜರಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಎದುರುದಾರರ ಪರವಾಗಿ

ಪಾಟೀ ಸವಾಲಿಗೆ ಅವಕಾಶ ನೀಡಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.